ದಿನಾಂಕ 21-09-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿಯ ಪರ ಶ್ರೀ ಎಂ.ಎಂ.ಎಂ ವಕೀಲರಿಂದಃ**

1. ನಾನು ಸಲ್ಲಿಸಿರುವ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಸಂಗತಿಗಳನ್ನು ನಾನೇ ಮಾಹಿತಿ ನೀಡಿ ಬರೆಸಿರುತ್ತೇನೆ. ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಸಂಗತಿಗಳೆಲ್ಲವೂ ಸತ್ಯದಿಂದ ಕೂಡಿರುತ್ತವೆ. ನಾನು ದಸ್ತಾವೇಜು ಬರಹಗಾರರಾದ ಎನ್.ಎಫ್. ಚಂದಾಪುರ ರವರ ಬಳಿ ಕೆಲಸ ಮಾಡುತ್ತೇನೆ ಎಂದರೆ ಸರಿಯಲ್ಲ. ಸದರಿ ಪತ್ರ ಬರಹಗಾರರ ಹತ್ತಿರ ನಾನು ಕೆಲಸ ಮಾಡುತ್ತಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಎನ್.ಎಫ್. ಚಂದಾಪುರ ರವರ ಬಳಿ ಕೆಲಸ ಮಾಡುತ್ತಿರುವುದರಿಂದ ಅವರು ತಯಾರಿಸುವ ದಸ್ತಾವೇಜುಗಳಿಗೆ ಸಾಕ್ಷಿದಾರರಾಗಿ ಸಹಿ ಮಾಡುತ್ತೇನೆ ಎಂದರೆ ಸರಿಯಲ್ಲ. ಸದರಿ ಕಾರಣಗಳಿಗೆ ನಿ.ಪಿ-6 ರ ಭಕ್ಷೀಸು ಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಮಗಳು ಭಕ್ಷೀಸು ಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ವಾದಿ ಮತ್ತು ಆಕೆಯ ಮಗಳು ನಿ.ಪಿ-6 ರ ಭಕ್ಷೀಸು ಪತ್ರವನ್ನು ಬರೆಯಲು ಸ್ವತಃ ಮಾಹಿತಿ ನೀಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ-6 ರ ಭಕ್ಷೀಸು ಪತ್ರವನ್ನು ಪ್ರತಿವಾದಿಯೊಂದಿಗೆ ನಾನು ಮತ್ತು ದಸ್ತಾವೇಜು ಬರಹಗಾರರಾದ ಎನ್.ಎಫ್ ಚಂದಾಪುರ ರವರು ಸೃಷ್ಟಿರುತ್ತೇವೆ ಎಂದರೆ ಸರಿಯಲ್ಲ. ವಾದಿಯು ಭಕ್ಷೀಸು ಪತ್ರವನ್ನು ಬರೆದು ಕೊಡದೇ ಇದ್ದರೂ ಪ್ರತಿವಾದಿಯ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ